ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಅನುಬಂಧ–1

ವಿಮಾನ ನಿಲುಗಡೆಗೆ ಶುಲ್ಕ ವಿಧಿಸುವುದು

1998 (2265); ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಮಡಿಕೇರಿ)

ಅ) ಜಕ್ಕೂರು ವಿಮಾನ ನಿಲ್ದಾಣದಲ್ಲಿ ವಿಮಾನ ನಿಲುಗಡೆ ಯಾವ ಯಾವ ಸಂಸ್ಥೆಗಳು ಪರವಾನಗಿ ಪಡೆದಿವೆ;

ಆ) ಯಾವ ಯಾವ ವಿಮಾನಗಳಿಗೆ ಎಷ್ಟೆಷ್ಟು ನಿಲ್ದಾಣದ ಶುಲ್ಕವನ್ನು ನಿಗದಿ ಪಡಿಸಲಾಗಿದೆ;

ಇ) ನಿಲ್ದಾಣ ಶುಲ್ಕವನ್ನು ಪಾವತಿಸದಿರುವ ಸಂಸ್ಥೆಗಳು ಎಷ್ಟು, ಅವು ಯಾವುವು;

ಈ) ಶುಲ್ಕ ವಸೂಲಾತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಪೂರ್ಣ ವಿವರ ನೀಡುವುದು)

ಶ್ರೀ ಕೆ. ಅಭಯಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು)

ಅ) ಜಕ್ಕೂರು ವಿಮಾನ ನಿಲ್ದಾಣದಲ್ಲಿ ಈ ಕೆಳಕಂಡ ಸಂಸ್ಥೆಗಳಿಗೆ ವಿಮಾನ ಸಂಬಂಧಿ ಚಟುವಟಿಕೆಗಳಿಗೆ ಪರವಾನಗಿ ನೀಡಲಾಗಿದೆ.

1. ಅಗ್ನಿ ಏರೋಸ್ಪೋರ್ಟ್ಸ್ ಅಡ್ವೆಂಚರ್ ಅಕಾಡೆಮಿ
2. ಡೆಕ್ಕನ್ ಚಾರ್ಟರ್ಸ್ ಲಿಮಿಟೆಡ್
3. ಜುಪಿಟರ್ ಏವಿಯೇಷನ್
4. ಥಾಮಸ್ ಅಸೋಸೊಯೇಟ್ಸ್
5. ನ್ಯಾಷನಲ್ ಏರೋಸ್ಪೇಸ್ ಲ್ಯಾಬೊರೇಟರಿಸ್

6. ಎನ್.ಸಿ.ಸಿ

7. ಇತರೆ ಖಾಸಗಿ ವಿಮಾನ ಮಾಲೀಕರು

ಆ) ಲ್ಯಾಂಡಿಂಗ್ ಶುಲ್ಕ: ಮೈಕ್ರೋಲೈಟ್ ವಿಮಾನಗಳಿಗೆ ₹ 200/– ಪ್ರತಿ ಲ್ಯಾಂಡಿಂಗ್ (ದಿ: 01.08.2014 ರಿಂದ ಅನ್ವಯ)

ಇತರ ವಿಮಾನಗಳಿಗೆ ₹ 3000/– ಪ್ರತಿ ಲ್ಯಾಂಡಿಂಗ್

ಪಾರ್ಕಿಂಗ್ ಶುಲ್ಕ: ಮೈಕ್ರೋಲೈಟ್ ವಿಮಾನಗಳಿಗೆ ₹ 10/– ಪ್ರತಿ ಗಂಟೆಗೆ (ದಿ: 01.08.2014 ರಿಂದ ಅನ್ವಯ)

ಇತರ ವಿಮಾನಗಳಿಗೆ (i) ₹ 100/–ಪ್ರತಿ ಗಂಟೆಗೆ (ಸರ್ಕಾರಿ ಹ್ಯಾಂಗರ್ ಒಳಗಡೆ)

(ದಿ: 01.08.2014ರಿಂದ ಅನ್ವಯ) (ii) ₹ 50/– ಪ್ರತಿ ಗಂಟೆಗೆ (ಸರ್ಕಾರಿ ಹ್ಯಾಂಗರ್ ಹೊರಗಡೆ)

(ದಿ: 01.08.2014ರಿಂದ ಅನ್ವಯ)

ನೆಲಬಾಡಿಗೆ ಶುಲ್ಕ:

1. ಅಗ್ನಿ ಏರೋಸ್ಪೋರ್ಟ್ಸ್ ಅಡ್ವೆಂಚರ್ ಅಕಾಡೆಮಿ – ಹ್ಯಾಂಗರ್–1 – ₹ 3,14,827/– ವಾರ್ಷಿಕ

   ಹ್ಯಾಂಗರ್–2 – ₹ 5,39,575/– ವಾರ್ಷಿಕ (ಪರಿಷ್ಕರಣೆಯಲ್ಲದೆ)

2. ಡೆಕ್ಕನ್ ಚಾರ್ಟರ್ಸ್ ಲಿಮಿಟೆಡ್– ₹ 22,48,253/– ವಾರ್ಷಿಕ

3. ಜುಪಿಟರ್ ಏವಿಯೇಷನ್ – ₹ 5,62,057/– ವಾರ್ಷಿಕ

4. ಥಾಮಸ್ ಅಸೋಸೊಯೇಟ್ಸ್ ₹ 60,000/– ವಾರ್ಷಿಕ

5. ನ್ಯಾಷನಲ್ ಏರೋಸ್ಪೇಸ್ ಲ್ಯಾಬೊರೇಟರಿಸ್ – ₹ 39,000 ವಾರ್ಷಿಕ

6. ಎನ್.ಸಿ.ಸಿ – ₹ 21,584/– ವಾರ್ಷಿಕ

ಇ)

1. ಅಗ್ನಿ ಏರೋಸ್ಪೋರ್ಟ್ಸ್ ಅಡ್ವೆಂಚರ್ ಅಕಾಡೆಮಿ –

   ಹ್ಯಾಂಗರ್ –1 ₹2,83,879/– (ದಿ: 31.03.2015ರ ವರೆಗೆ)

   ಹ್ಯಾಂಗರ್ –2 ₹28,78,665/– (ದಿ: 31.03.2015ರ ವರೆಗೆ)

   ಲ್ಯಾಂಡಿಂಗ್ ಶುಲ್ಕ – ₹ 39,091/–

   ಒಟ್ಟು ₹ 32,01,635/–

2. ಮೆ: ರಂಜೀತ್‌ಪುರ ಇನ್ಫ್ರಾಸ್ಟ್ರಕ್ಚರ್ ಪ್ರೈ. ಲಿ. ಲ್ಯಾಂಡಿಂಗ್ ಶುಲ್ಕ – ₹ 6,78,100/– (ಹಳೆಯ ಬಾಕಿ)

3. ಮೆ: ಕ್ರಸೆಂಟ್ ಏರ್‌ಕಾರ್ಗೋ, ಚೆನ್ನೈ – ಲ್ಯಾಂಡಿಂಗ್ ಶುಲ್ಕ – ₹ 3,39,000/– (ಹಳೆಯ ಬಾಕಿ)

4. ಮೆ: ಓಬಳಪುರಂ ಮೈನಿಂಗ್ ಕಂಪನಿ – ಲ್ಯಾಂಡಿಂಗ್ ಶುಲ್ಕ – ₹ 81,000/– (ಹಳೆಯ ಬಾಕಿ)

5. ಮೆ: ರೆಲಿಗೇರ್ ಏವಿಯೇಷನ್ ಲಿ – ಲ್ಯಾಂಡಿಂಗ್ ಶುಲ್ಕ – ₹ 17,900/– (ಹಳೆಯ ಬಾಕಿ)

6. ಎನ್.ಸಿ.ಸಿ. ನೆಲಬಾಡಿಗೆ ಶುಲ್ಕ – ₹ 43,168/– (ದಿ: 31.03.2015ರ ವರೆಗೆ)

ಈ)

1. **ಅಗ್ನಿ ಏರೋಸ್ಪೋರ್ಟ್ಸ್ ಅಡ್ವೆಂಚರ್ ಅಕಾಡೆಮಿ:** ಸದರಿ ಸಂಸ್ಥೆಯವರು ಹ್ಯಾಂಗರ್ ಸಂಖ್ಯೆ: 2 ರ ನೆಲಬಾಡಿಗೆ ದರವನ್ನು ಕಡಿಮೆ ಮಾಡಲು ಸರ್ಕಾರಕ್ಕೆ ಹಲವು ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಈ ಅರ್ಜಿಗಳನ್ನು ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಲು ಗೌರ್ನಿಂಗ್ ಕೌನ್ಸಿಲ್ ಸಭೆಯಲ್ಲಿ ತೀರ್ಮಾನವಾಗಿದೆ. ಸದ್ಯದಲ್ಲಿಯೇ ಇದನ್ನು ತೀರ್ಮಾನಿಸಿ ಬಾಕಿ ವಸೂಲಿ ಮಾಡುವ ಸಾಧ್ಯತೆಗಳಿವೆ.
2. **ಮೆ: ರಂಜೀತ್‌ಪುರ ಇನ್ಫ್ರಾಸ್ಟ್ರಕ್ಚರ್ ಪ್ರೈ. ಲಿ.:** ಸದರಿ ಸಂಸ್ಥೆಯ ವೈಮಾನಿಕ ಶಾಕೆಯನ್ನು ವಿಸರ್ಜಿತಗೊಳಿಸಲಾಗಿದೆ ಎಂದು ತಿಳಿದುಬಂದಿದೆ. ಸಂಸ್ಥೆಯ ಮುಖ್ಯ ಕಛೇರಿಯೊಂದಿಗೆ ಪತ್ರ ವ್ಯವಹಾರ ನಡೆಯುತ್ತಿದೆ.
3. **ಮೆ: ಕ್ರಸೆಂಟ್ ಏರ್‌ಕಾರ್ಗೋ, ಚೆನ್ನೈ: ಮೆ:** ಓಬಳಪುರಂ ಮೈನಿಂಗ್ ಕಂಪನಿ ಹಾಗೂ ಮೆ: ರೆಲಿಗೇರ್ ಏವಿಯೇಷನ್ ಲಿ: ಈ ಸಂಸ್ಥೆಗಳಿಂದ ಬಾಕಿ ವಸೂಲಿ ಮಾಡಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಅಥವಾ ಪೊಲೀಸ್ ಅಧಿಕಾರಿಗಳಿಗೆ ಪತ್ರ ಬರೆಯಲು ಗೌರ್ನಿಂಗ್ ಕೌನ್ಸಿಲ್ ಸಭೆಯಲ್ಲಿ ತೀರ್ಮಾನವಾಗಿದೆ.
4. **ಎನ್.ಸಿ.ಸಿ:** ಎನ್.ಸಿ.ಸಿ ಸಂಸ್ಥೆಯ ಖರ್ಚು ವೆಚ್ಚಗಳನ್ನು ಕರ್ನಾಟಕ ಸರ್ಕಾರವೇ ಭರಿಸುತ್ತಿರುವುದರಿಂದ, ಎನ್.ಸಿ.ಸಿ. ಸಂಸ್ಥೆಯಿಂದ ನೆಲಬಾಡಿಗೆ ವಸೂಲು ಮಾಡಲು ಕ್ರಮವಹಿಸಲಾಗುತ್ತಿದೆ.